2. Notification No. HD 69 CNA 91 dated 14th March 1991, Regarding filing an application in form "AA" upto 1-6-87 for the purpose of conversion of Touring Cinema into Semi-permanent by Sri JN Nagaraja, Proprietor, Sri Nagaraja Touring Talkies, Jangama Kote, Siddlaghatta, Taluk, Kolar District.

3. Order No. HD 264 CNA 89 dated 14th March 1991, Regarding Sereening of 15 mm Children films in the Auditorium of Jawahar Bal Bhavan, Mysore.

as required under Section 20 of the Karnataka Cinemas (Regulation) Act, 1964.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ಅರ್ಜಿಗಳನ್ನು ಒಪ್ಪಿಸುವುದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಮೀನುಗಾರಿಕಾ ಬಂದರಿನ ನಿರ್ಮಾಣದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಅರ್ಜಿಗಳನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ.

ಅ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯಲ್ಲಿ ನದಿಗೆ ತಡೆಗೋಡೆಯನ್ನು ಕಟ್ಟುವ ಬಗ್ಗೆ.

ಆ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯ ರಸ್ತೆಗಳ ಅಭಿವೃದ್ಧಿಯ ಬಗ್ಗೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಎರಡನೆಯ ಹಾಗೂ ಮೂರನೆಯ (9ನೇ ವಿಧಾನಸಭೆ) ವರದಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನು ಒಪ್ಪಿಸಲಾಯಿತು. ಈಗ ನಿಯಮ 334ರ ಕೆಳಗೆ ಚರ್ಚೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಚುನಾವಣೆ ಸಮಯದಲ್ಲಿ ಅಧಿಕಾರಿಗಳ ವರ್ಗಾವರ್ಗಿ

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ [illegible] : ಮಾನ್ಯ ಅಧ್ಯಕ್ಷರೇ, ಈಗ ಹೆಚ್ಚೂ ಕಡಿಮೆ ಲೋಕಸಭೆ ಚುನಾವಣೆ ಅಪೋಷಿತವಾಗಿಯಾದರೂ ಘೋಷಣೆಯಾಗಿದೆ. ತಾರೀಖನ್ನು ನಿಗದಿ ಮಾಡಬೇಕು. ಚುನಾವಣಾ ಆಯೋಗದವರು ಸರಕಾರಗಳನ್ನು ನಡೆಸತಕ್ಕಂತಹ ವಿವಿಧ ರಾಜಕೀಯ ಪಕ್ಷಗಳಿಗೂ ಮತ್ತು ಸರಕಾರಗಳಿಗೂ ಒಂದು ಸುತ್ತೋಲೇಯನ್ನು ಕಳಿಸಿ 25ನೇ ತಾರೀಖು ಅಥವಾ ಅದು ಕಳೆದ ಮೇಲೇ ಯಾವ ವರ್ಗಾವರ್ಗಿಗಳನ್ನೂ ಮಾಡಬಾರದೆಂದು ನಿರ್ದೇಶನವನ್ನು ಕೊಟ್ಟಿದ್ದಾರೆ.

ತತ್‌ಕ್ಷಣದಲ್ಲಿ ನೂರಕ್ಕೂ ಹೆಚ್ಚು ಹಿರಿಯ ಐ.ಎ.ಎಸ್. ಅಧಿಕಾರಿಗಳ ವರ್ಗಾವಣೆಯಾಗಿದೆ. 31 ಐ.ಎ.ಎಸ್., 45 ಕೆ.ಎ.ಎಸ್. ಇನ್ನು ಇತರ ಅಧಿಕಾರಿಗಳು ನೂರು ಮಂದಿಯನ್ನು ವರ್ಗಾವಣೆ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಈ ಹಿಂದೆ ಅನೇಕ ಬಾರಿ ಹೇಳಿದ್ದೇನೆ. ವರ್ಗಾವರ್ಗಿಗಳು ಸರಕಾರದ ವ್ಯಾಪ್ತಿಗೆ ಬರತಕ್ಕಂತಹ ವಿಚಾರವಾದರೂ ಕೂಡ ಎಲ್ಲಿಯಾದರೂ ಒಂದು ಕಡೆ ಅದು ನಿಲ್ಲಬೇಕು. ಅದನ್ನು ಬಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಬದಲಾವಣೆಯಾದರೆ ಒಂದು ವರ್ಗಾವಣೆ, ಹೊಸ ಮುಖ್ಯ ಮಂತ್ರಗಳು ಬಂದಾಗ ಒಂದು ವರ್ಗಾವಣೆ ಈಗ ಚುನಾವಣೆ ಬಂದಾಗ ಮತ್ತೊಂದು ವರ್ಗಾವಣೆ ಮಾಡುವುದು ಸರಿಯಲ್ಲ. ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಅಲ್ಲಿಗೆ ಹೋಗಿ 10 ತಿಂಗಳಾಗಿತ್ತು ಅವರು ವರ್ಗಾವಣೆಯಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ವರ್ಗಾವಣೆಯಾಗಿದ್ದು ಚುನಾವಣೆಗೆ ಬೇಕಾದಂಥ ಎಲ್ಲಾ ತಯಾರಿಗಳನ್ನೂ ಹೆಚ್ಚೂ ಕಡಿಮೆ ನಡೆಸುತ್ತಿದ್ದಾರೆ. ನಮ್ಮ ಜೊತೆಯಲ್ಲಿ ಸಂಪರ್ಕ ಹೊಂದಿದ್ದಾರೆ.

MR. SPEAKER, If I have understood correctly, according to the Election Commission's directives to the state governments there is no ban for effecting transfers. They had only put the outside deadline as 25th, within which if there are any transfers to be made, could be effected. Perhaps, that is what the Government has done. Today is 26th. The G.O. has been issued yesterday, which is the deadline fixed by the Election Commission. There is no force in your argument.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಕೊಟ್ಟಂತಹ ತಾರೀಖಿನ್ನು ದುರುಪಯೋಗಪಡಿಸಿಕೊಂಡು ವರ್ಗಾವಣೆಯನ್ನು ಮಾಡುತ್ತಿದ್ದಾರೆ. ಅಧಿಕಾರಿಗಳ ವರ್ಗಾವಣೆಗೆ ನಿಯಮ ಇದೆ.

ಅಧ್ಯಕ್ಷರು : ದುರುಪಯೋಗಪಡಿಸಿಕೊಂಡರು ಹಾಗೆ ಎನ್ನತಕ್ಕಂಥ ವಿಚಾರ ಇದ್ದಿದ್ದರೆ ಎಲೆಕ್ಷನ್ ಕಮಿಷನ್‌ರವರು ಬ್ಲಾಂಕೆಟ್ ಬಾನ್ ಹಾಕುತ್ತಿದ್ದರು ಯಾರೂ ವರ್ಗಾವಣೆ ಮಾಡಬಾರದೆಂದು ಹೇಳುತ್ತಿದ್ದರು. ಎಲೆಕ್ಷನ್ ಕಮಿಷನ್‌ಗೆ ರಾಜ್ಯ ಸರಕಾರಗಳ ಮೇಲೆ ವಿಶ್ವಾಸವಿರುವುದರಿಂದ ಚುನಾವಣೆ ನಡೆಸತಕ್ಕಂತಹ ಹೊಣೆಗಾರಿಕೆಯು ರಾಜ್ಯ ಸರಕಾರಕ್ಕೆ ಉಂಟು. ಆದ್ದರಿಂದ 25ಕ್ಕೆ ಡೆಡ್‌ಲೈನ್ ಅನ್ನು ಕೊಟ್ಟಿದ್ದಾರೆ. ಇವರು ಅದರೊಳಗೆ ವರ್ಗಾವಣೆ ಮಾಡಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಈ ಹಿಂದೆ ಡಿಸೆಂಬರ್‌ನಲ್ಲಿ ಒಂದು ವರ್ಗಾವಣೆಯಾಗಿತ್ತು. ಈಗ ಮತ್ತೊಂದು ವರ್ಗಾವಣೆ. ಹೀಗೆ ಪ್ರತಿಯೊಂದು 4-6 ತಿಂಗಳಿಗೊಮ್ಮೆ ಮಾಸ್ ಟ್ರಾನ್ಸ್‌ಫರ್ಸ್ ಆಗುತ್ತಿದ್ದರೆ, ಆಡಳಿತ ವ್ಯವಸ್ಥೆಯ ಮೇಲೆ ಜೊತೆಗೆ ಕೆಲಸ ಮಾಡತಕ್ಕಂತಹ ಅಧಿಕಾರಿಗಳೇನಿದ್ದಾರೆ ಅವರಿಗೂ ಕೂಡ ತೊಂದರೆಯಾಗುತ್ತದೆ. ಪರೀಕ್ಷೆಗಳು ನಡೆಯುತ್ತಿದೆ, ಶಾಲಾ ಕಾಲೇಜುಗಳು ಪ್ರಾರಂಭವಾಗತಕ್ಕಂತಹ ವಿಚಾರಗಳನ್ನೂ ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೆಲವು ನಿಯಮಗಳನ್ನು ಅನುಸರಿಸಿ ಏಪ್ರಿಲ್ ಮೇ ತಿಂಗಳಲ್ಲಿ ವರ್ಗಾವಣೆ ಮಾಡಬೇಕೆಂದು ಇದೆ. ಸಾರ್ವತ್ರಿಕವಾಗಿ ವರ್ಗಾವಣೆಯಾದರೆ ನಾವು ಪ್ರಸ್ತಾಪ ಮಾಡುವುದಿಲ್ಲ. ಈಗ ಮಾರ್ಚ್‌ನಲ್ಲಿ ವಿಶೇಷವಾಗಿ ಯಾವ ಕಾಲದಲ್ಲೂ ಆದದ್ದು ಇಲ್ಲ. ಇಂತಹ ಮಾಸ್ ಟ್ರಾನ್ಸ್‌ಫರ್ಸ್‌ನ್ನು ಚುನಾವಣೆ ಮುಂದಿಟ್ಟುಕೊಂಡು ಮಾಡುವುದು ಸರಿಯಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಿದ್ದಾರೆ

ಅಧ್ಯಕ್ಷರು : ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಿದ್ದೀರಿ ಎಂದು ಹೇಳಿದಿರಿ 60 ವರ್ಗಾವಣೆ ನಡೆದರೆ ಅದು ಮಾಸ್ ಟ್ರಾನ್ಸ್‌ಫರ್ಸ್ ಆಗುತ್ತದೆಯೇ? 4 ಕೋಟಿ 40ಲಕ್ಷ ಜನರಿದ್ದಾರೆ. 60 ಟ್ರಾನ್ಸ್‌ಫರ್ಸ್ ಮಾಡಿದರೆ ಅದು ಮಾಸ್ ಟ್ರಾನ್ಸ್‌ಫರ್‌ತ್ತದೆಯೇ? 200 ಇರಲಿ ಅದು ಮಾಸ್ ಟ್ರಾನ್ಸ್‌ಫರ್ ಆಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ವಿಭಾಗಾಧಿಕಾರಿಗಳ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳ ವರ್ಗಾವಣೆಯನ್ನು ಮಾರ್ಚ್ ತಿಂಗಳಲ್ಲಿ ಮಾಡುತ್ತಾರೆ ಎಂದರೆ ಏನಾದರೂ ಕಾರಣ ಇರಬೇಕು. 1-2 ವರ್ಗಾವಣೆಗಳನ್ನು ಆಗಾಗ್ಗೆ ಮಾಡುತ್ತಿರುತ್ತಾರೆ. ನೂರು ಜನ ಸೀನಿಯರ್ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ.... It tells upon the administration, that is all my concern.

ಶ್ರೀ ಬಿ. ಶಿವಣ್ಣ : ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾಳೆ ದಿವಸ ಸದನ ಮುಗಿಯುತ್ತದೆ ಅಷ್ಟರೊಳಗೆ ನಮಗೆ ಉತ್ತರ ಸಿಗುತ್ತದೆಯೇ?

ಅಧ್ಯಕ್ಷರು : ಶಿವಣ್ಣನವರ ಕಾನೂನು, ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತದೆಂದು ಹೇಳುತ್ತದೆ. ತಾವು ಉತ್ತರಕ್ಕೆ ಅಪೇಕ್ಷೆಪಡುತ್ತಿಲ್ಲವೆಂದು ನಿಮಗೆ ಗೊತ್ತು.

ಶ್ರೀ ಕೆ.ಎಸ್. ಈಶ್ವರಪ್ಪ : ವರ್ಗಾವರ್ಗಿ ನಿಲ್ಲಿಸಲಿ. ಅದಕ್ಕೆ ಸ್ಟೇ ಕೊಡಲಿ.

ಶ್ರೀ ಧರ್ಮಸಿಂಗ್ : ಐಎಎಸ್, ಐಪಿಎಸ್. ಅಧಿಕಾರಿಗಳ ಟ್ರಾನ್ಸ್‌ಫರ್‌ಗಳಾಗಿದೆ ಎಂದು ವಿರೋಧ ಪಕ್ಷದ ನಾಯಕರು ಮತ್ತು ಇತರರ ಸದಸ್ಯರು ಹೇಳುತ್ತಿದ್ದಾರೆ. ತಾವು ಪಟ್ಟಿ ಕೂಡ ನೋಡಿರಬಹುದು. ಪೊಲೀಸು ಖಾತೆಗೆ ಸಂಬಂಧಪಟ್ಟಿದ್ದನ್ನು ಮಾಡುವುದಕ್ಕೆ ಹೋಗಿಲ್ಲ. 25ನೇ ತಾರೀಖಿನೊಳಗೆ ನೀವು ಯಾವುದಾದರೂ ಟ್ರಾನ್ಸ್‌ಫರ್ ಮಾಡಬೇಕಾದರೆ ಮಾಡಬಹುದೆಂದು ನಮಗೆ ಆದೇಶ ಬಂದಿದೆ. ನಾವು 23ನೇ ತಾರೀಖು ಮಾಡಿದ್ದೇವೆ. 24ನೇ ತಾರೀಖು ಭಾನುವಾರ ಇದ್ದುದರಿಂದ ಅದು ನಿನ್ನೆ ಇಷ್ಯೂ ಆಗಿದೆ. ಎರಡನೆಯದಾಗಿ 260 ಐಎಎಸ್ ಅಧಿಕಾರಿಗಳಲ್ಲಿ ನಾವು ವರ್ಗಾವಣೆ ಮಾಡಿರುವುದು 8-9 ಜನರನ್ನು. ಅದೇ ರೀತಿ ಐಪಿಎಸ್ ಅಧಿಕಾರಿಗಳಲ್ಲಿ 8-10 ಜನರನ್ನು ವರ್ಗಾವಣೆ ಮಾಡಿದ್ದೇವೆ. ನಾವು ಏಕಾಏಕಿ ವರ್ಗಾವಣೆ ಮಾಡಿಲ್ಲ. ಅವರನ್ನು ಮೇ ಜೂನ್ ತಿಂಗಳಿನಲ್ಲಿ ಟ್ರಾನ್ಸ್‌ಫರ್ ಮಾಡಬೇಕಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : 23ನೇ ತಾರೀಖು ಮುಖ್ಯಮಂತ್ರಿಗಳು ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರಲಿಲ್ಲ.

ಶ್ರೀ ಧರ್ಮಸಿಂಗ್ : 23ನೇ ತಾರೀಖು ದೆಹಲಿಯಿಂದ 1.15ಕ್ಕೆ ಬಂದಿದ್ದಾರೆ. ನಾನೂ ಸಹ ಏರ್‌ಪೋರ್ಟ್‌ಗೆ ಹೋಗಿದ್ದೆ. ಮುಖ್ಯ ಮಂತ್ರಿಗಳು ಹೆಡ್‌ಕ್ವಾರ್ಟರ್‌ನಲ್ಲಿದ್ದರು. ಎರಡನೆಯದಾಗಿ ಚುನಾವಣಾ ಕಮೀಷನರ್‌ರವರ ಆದೇಶ ಬಂದಮೇಲೆ ನಾವು ವರ್ಗಾವಣೆ ಮಾಡುವುದಕ್ಕಾಗುವುದಿಲ್ಲ. ಚುನಾವಣೆಯ ಕಮೀಷನರ್‌ರವರ ಆದೇಶ ಈ ರೀತಿ ಬರದಿದ್ದರೆ ನಾವು ಯಾರನ್ನು ಮಾರ್ಚಿ ತಿಂಗಳಿನಲ್ಲಿ ವರ್ಗಾವಣೆ ಮಾಡುತ್ತಿರಲಿಲ್ಲ. ವರ್ಗಾವಣೆ ಮಾಡಿರುವುದು ಕೂಡ ಆಡಳಿತಾತ್ಮಕ ದೃಷ್ಟಿಯಿಂದ. ಬಾಕಿ ಯಾವುದೇ ಉದ್ದೇಶದಿಂದ ಮಾಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಚುನಾವಣಾ ಕಮೀಷನ್ ಆಸಕ್ತಿ ಏನಿದೆ ಅದು ಸಧ್ಯಕ್ಕೆ ವರ್ಗಾವಣೆಯನ್ನು ಮಾಡಬಾರದೆಂದು ಇದೆ. ಅದು ಇವರಿಗೆ ಗೊತ್ತಿಲ್ಲ.

ಶ್ರೀ ಧರ್ಮಸಿಂಗ್ : ಯಾವುದೇ ರಾಜ್ಯ ಸರ್ಕಾರಗಳು ವರ್ಗಾವಣೆಯನ್ನು ಮಾಡಬೇಕಾದರೆ 25ನೇ ತಾರೀಖಿನೊಳಗಡೆ ಮಾಡಬೇಕೆಂದು ತಿಳಿಸಿದ್ದಾರೆ. ಆ ರೀತಿ ನಾವು 24ನೇ ತೀರೀಖಿನೊಳಗಡೆ ವರ್ಗಾವಣೆ ಮಾಡಿದ್ದೇವೆ.

ಅಧ್ಯಕ್ಷರು : ಚುನಾವಣಾ ಕಮೀಷನರ್ ಆದೇಶ ಕಳಿಹಿಸದಿದ್ದರೆ ಇವರು 24ನೇ ತಾರೀಖಿನೊಳಗೆ ವರ್ಗಾವಣೆಯನ್ನು ಮಾಡುತ್ತಿರಲಿಲ್ಲ. ಚುನಾವಣಾ ಕಮೀಷನರ್‌ರವರು ಪರೋಕ್ಷವಾಗಿ ರಾಜ್ಯಸರ್ಕಾರಗಳಿಗೆ ನೀವು ವರ್ಗಾವಣೆ ಮಾಡುವುದು ಇದ್ದರೆ 25ನೇ ತಾರೀಖಿನೊಳಗಡೆ ಮಾಡಿ ಮುಗಿಸಿ ಎಂದು ಹೇಳಿದ್ದಾರೆ. ಹಾಗೆ ಅವರು ಹೇಳಿದ್ದರಿಂದ that is the liberal interpretation of the directive of the Election Commission.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರು, ಒಂದು ನಿಮಿಷ. ಈಗ ಚುನಾವಣಾ ಆಯೋಗದವರು ನಿನ್ನೆ ಕೊಟ್ಟಂತಹ ಆದೇಶ, ಕಾನೂನು ಪ್ರಕಾರ ಬರವಣಿಗೆಯಲ್ಲಿ ಕೊಟ್ಟಿದ್ದಾರೆ. ಚುನಾವಣೆ ಬರುತ್ತಿದೆ ಎನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಟ್ಟಿದ್ದರು. ಇದನ್ನು ಮೊದಲೇ ಕೊಟ್ಟಿದ್ದರು. ನಿನ್ನೆ ಬಂದದ್ದು ಅಲ್ಲ. ಚುನಾವಣೆ ಬರುತ್ತದೆ ಎನ್ನುವುದು ಸುಮಾರು ಒಂದು ತಿಂಗಳಿಂದಲೇ ಗೊತ್ತಿದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರಬಹುದು 25ನೇ ತಾರೀಖು ಕ್ಯಾಲೆಂಡರ್ ಆಫ್ ಇವೆಂಟ್ಸ್ ಬರುವುದಕ್ಕೆ ಮುಂಚೆ ಟ್ರಾನ್ಸ್‌ಫರ್ ಮಾಡಬಹುದು. ಕ್ಯಾಲೆಂಡರ್ ಆಫ್ ಇವೆಂಟ್ಸ್ ಬಂದಮೇಲೆ ವರ್ಗಾವಣೆ ಮಾಡಬಾರದು. 1982ರಲ್ಲಿ ಸುಪ್ರೀಂಕೋರ್ಟ್ ಬಿಹಾರ ಸರ್ಕಾರಕ್ಕೆ ಇದರ ಬಗ್ಗೆ ಆದೇಶ ಕೊಟ್ಟಿದೆ. ಕ್ಯಾಲೆಂಡರ್ ಆಫ್ ಇವೆಂಟ್ಸ್ ಆದಮೇಲೆ ಟ್ರಾನ್ಸ್‌ಫರ್ ಮಾಡಬಾರದು. ಪ್ರಪ್ರಥಮವಾಗಿ ಚುನಾವಣಾ ಕಮೀಷನ್‌ನಿಂದ 25ನೇ ತಾರೀಖಿನೊಳಗೆ ಟ್ರಾನ್ಸ್‌ಫರ್ ಮಾಡಬಹುದು, 25ನೇ ತಾರೀಖು ಆದಮೇಲೆ ಟ್ರಾನ್ಸ್‌ಫರ್ ಮಾಡಬಾರದೆಂದು ಚುನಾವಣಾ ಕಮೀಷನ್‌ನ ಆದೇಶವಿದೆ. ಅದಕ್ಕೆ ಮುಂಚೆ ಮಾಡಬಹುದೆಂದು ಹೇಳಿದ್ದರು ನಾವು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಮಾರ್ಚಿ ತಿಂಗಳಿನಲ್ಲಿ ಈ ರೀತಿ ಟ್ರಾನ್ಸ್‌ಫರ್ ಮಾಡಿರುವುದರಿಂದ ಅಧಿಕಾರಿಗಳ ಪರಿಸ್ಥಿತಿ ಏನು?

ಅಧ್ಯಕ್ಷರು : ಅದನ್ನು ಎಲೆಕ್ಷನ್ ಕಮೀಷನ್ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಎಲೆಕ್ಷನ್ ಕಮೀಷನರ್‌ರವರು ಆ ರೀತಿ ಮಾಡಿ ಎಂದು ಹೇಳಿದ್ದಾರೆಯೆ? ಇವರಿಗೆ ವರ್ಗಾವಣೆ ಮಾಡಿ ಎಂದು ಯಾರು ಹೇಳಿದ್ದಾರೆ? ವರ್ಗಾವಣೆ ಮಾಡಿ ಎಂದು ಯಾರೂ ಹೇಳಿಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಎಲೆಕ್ಷನ್ ಕಮೀಷನ್‌ರವರು ಒಂದು ಆದೇಶ ಕೊಟ್ಟು ನೀವು ಏನಾದರೂ ವರ್ಗಾವಣೆ ಮಾಡುವುದು ಇದ್ದರೆ 25ನೇ ತಾರೀಖಿನೊಳಗೆ ಮಾಡಿ ಮುಗಿಸಿ ಎಂದು ಆದೇಶ ಕೊಟ್ಟಿದ್ದಾರೆ. ಅದರ ಪ್ರಕಾರ ಇವರು ಮಾಡಿ ಮುಗಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾಡಿ ಮುಗಿಸಿ ಎಂದು ಹೇಳಿಲ್ಲ. ಮಾಡಬಾರದು ಎಂದು ಆದೇಶವಿದೆ.

ಅಧ್ಯಕ್ಷರು : 25ನೇ ತಾರೀಖಿನೊಳಗೆ ವರ್ಗಾವಣೆ ಮಾಡಬಾರದೆಂದು ಎಲ್ಲಿದೆ ತೋರಿಸಿ.

ಶ್ರೀ ವಾಟಾಳ್ ನಾಗರಾಜ್ : ತಾವು ಆ ಪಟ್ಟಿಯನ್ನು ತರಿಸಿ ಸ್ವಾಮಿ.

ಅಧ್ಯಕ್ಷರು : ಅದು ನನ್ನ ಹತ್ತಿರವಿದೆ.

ಶ್ರೀ ವಾಟಾಳ್ ನಾಗರಾಜ್ : ಕೆಲವು ಅಧಿಕಾರಿಗಳು ವರ್ಗಾವಣೆಯಾಗಿ ಮೂರು ತಿಂಗಳಾಗಿದೆ. ಆರು ತಿಂಗಳಾಗಿದೆ, ಒಂದು ವರ್ಷ ಆಗಿದೆ.

ಅಧ್ಯಕ್ಷರು : ಇಬ್ಬರೂ ಒಟ್ಟಿಗೆ ಮಾತನಾಡಿದರೆ ಏನು ಪ್ರಯೋಜನ? ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಎಲೆಕ್ಷನ್ ಕಮೀಷನ್‌ನ ಇಂಟೆಂಷನ್ ಅರ್ಥಮಾಡಿಕೊಳ್ಳದೆ ಇದ್ದಕ್ಕಿದ್ದಹಾಗೆ ವರ್ಗಾವಣೆ ಮಾಡಿದರೆ ಅದು ಹೇಗೆ ಸ್ವಾಮಿ?

ಅಧ್ಯಕ್ಷರು : ಯಾರಾದರೂ ಒಬ್ಬರು ಮಾತನಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ವರ್ಗಾವಣೆಯಾದ ಅಧಿಕಾರಿಗಳು ಕೂಡಲೇ ಹೋಗಿ ಚಾರ್ಜ್ ತೆಗೆದುಕೊಳ್ಳಬೇಕೆಂದು ಹೇಳಿದರೆ ಅವರ ಪರಿಸ್ಥಿತಿ ಏನು? ತಕ್ಷಣ ಬೇರೆ ಕಡೆ ಹೋಗಿ ಎಂದು ಹೇಳತಕ್ಕ ಉದ್ದೇಶವೇನು? ಶಾಲಾ ಕಾಲೇಜುಗಳಿಗೆ ಹೋಗತಕ್ಕೆ ಅವರ ಮಕ್ಕಳ ಮರಿಗಳ ಗತಿಯೇನು? ವರ್ಗಾವಣೆ ಮಾಡತಕ್ಕ ಉದ್ದೇಶ ಸರ್ಕಾರಕ್ಕೆ ಏನಿತ್ತು? ದುರುದ್ದೇಶದಿಂದ ಮಾಡಿರುವ ಈ ವರ್ಗಾವಣೆಯನ್ನು ದಯಮಾಡಿ ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅದು ಆಗುವುದಿಲ್ಲ. ಇವತ್ತು 26ನೇ ತಾರೀಖು ಅದರಲ್ಲಿ ಏನಾದರೂ ಹೆಚ್ಚುಕಡಿಮೆ ಮಾಡಿದರೆ ಚುನಾವಣಾ ಕಮೀಷನ್‌ನ ಆದೇಶಕ್ಕೆ ವಿರೋಧವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದಂತು ಸ್ಪಷ್ಟ. ಯಾವುದಾದರೂ ಚುನಾವಣೆ ಬಂದಾಗ ತಮಗೆ ಗೊತ್ತಿದ್ದಹಾಗೆ ಲೋಕಸಭಾ ಅಭ್ಯರ್ಥಿಗಳು ಒಬ್ಬೊಬ್ಬರು ಏಜೆಂಟರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ. Expunged as on ordered by the chair.

Mr. Speaker : That is an insinuation which need not go into records. You cannot attribute motives to Govt. Servants. They serve any Government which come into power which has got the mandate of the people. You don't need my permission to say it in public platform.

Sri Eswarappa, a Senior Member of this House.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರ ಈ ರೀತಿ ಅನ್ಯಾಯ ಮಾಡುತ್ತಿದೆ.... (ಗೊಂದಲ)

ಅಧ್ಯಕ್ಷರು: ಇದು ಬಹಿರಂಗ ಸಭೆಯಲ್ಲಿ ಮಾಡುವ ಭಾಷಣ. ವಿಧಾನಸಭೆಯಲ್ಲಿ ಅಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಬಹಿರಂಗ ಸಭೆಯಲ್ಲಿ ಖಂಡಿತ ನಾನು ಈ ರೀತಿ ಮಾಡುತ್ತೇನೆ. ಜನರಿಗೆ ಹೇಳುತ್ತೇವೆ, ಹೇಳಿಯೇ ಹೇಳುತ್ತೇವೆ.....

ಅಧ್ಯಕ್ಷರು : ಇಲ್ಲಿ ಹೇಳ್ಬೇಡಿ. ಅಲ್ಲಿಗೆ ಹೋಗಿ ಹೇಳಿ.

You don't need my permission to say in the public platform.

ಶ್ರೀ ಸಿ. ಬೈರೇಗೌಡ : ತಾವು ಈಗಾಗಲೇ ಅಪ್ಪಣೆ ಕೊಡಿಸಿದ್ದೀರಿ.... (ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ: ಇದು ಬೀದಿಯಲ್ಲಿ ಆಡತಕ್ಕಂಥ ಮಾತು. ಇಲ್ಲಿ ಹೇಳಿದರೆ ಆಗುವುದಿಲ್ಲ. ನಿಮಗೆ ಸರಿಕಾಣದಿದ್ದರೆ ಧರಣಿ ಮಾಡಿ ಸಭಾತ್ಯಾಗ ಮಾಡಿ....

ಅಧ್ಯಕ್ಷರು: ಏಕೆ ಅವರಿಗೆ ನೀವು ಪ್ರಚೋದನೆ ಮಾಡಿತ್ತೀರಿ? ನಿಮ್ಮ ಬುದ್ದಿವಾದ ಕೇಳಿದರೇ ಅವರು?

ಶ್ರೀ ಎಲ್.ಆರ್ ಶಿವರಾಮೇಗೌಡ : ಇದು ಮಾತನಾಡತಕ್ಕಂಥ ಮಾತೇ ಎಂದು ಅವರನ್ನು ಕೇಳಿದೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಶಿವರಾಮೇಗೌಡರು ಹೇಳಿದ್ದುದು ಸರಿಯಲ್ಲ. ಅವರು ಬೀದಿಯಲ್ಲಿ ಭಾಷಣ ಮಾಡಿಕೊಂಡೇ ಇಲ್ಲಿಗೆ ಬಂದಿರೋದು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಹೇಳಿದ್ದಕ್ಕೆ ಕ್ಷಮೆ ಕೇಳಬೇಕು. ಹೀಗೆ ಹೇಳಬಹುದೇ?

ಶ್ರೀ ಎಲ್.ಆರ್. ಶಿವರಾಮೇಗೌಡ : ಹೀಗೆ ಅವರು ಹೇಳಬಹುದೇ?

ಅಧ್ಯಕ್ಷರು : ಅದನ್ನೇ ನಾನು ಹೇಳಿದ್ದುದು ನೀವು ಏಕೆ ಪ್ರಚೋದನೆ ಮಾಡುತ್ತಿದ್ದೀರಿ? ನೀವು ಹೇಳಿದ್ದು ತಪ್ಪಾಗಿದ್ದರೆ ಕ್ಷಮೆ ಕೇಳಿ. ಕ್ಷಮೆ ಕೇಳುವುದರಿಂದ ನಮಗೇನೂ ಅವಮಾನವಾಗುವುದಿಲ್ಲ. ಕ್ಷಮೆ ಕೇಳಿದವರು ಯಾರೂ ಚಿಕ್ಕವರಾಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ: ನಾನು ಮಾತನಾಡಿದ್ದು ತಪ್ಪು ಅನ್ನುವ ಹಾಗಿದ್ದರೆ ಏನು ಬೇಕಾದರೂ ಕ್ಷಮೆ ಕೇಳುವುದಕ್ಕೆ ನಾನು ಸಿದ್ಧನಿದ್ದೇನೆ.

(ಗೊಂದಲ)

ಅಧ್ಯಕ್ಷರು: ಈಗ ಶ್ರೀ ಈಶ್ವರಪ್ಪನವರು ಈ ಸಭೆಯ ಹಿರಿಯ ಸದಸ್ಯರು. ಆದ್ದರಿಂದ ನೀವು ಅವರ ಮನಸ್ಸಿಗೆ ಬೇಜಾರು ಮಾಡಿದ್ದೀರಿ. ಆದಕಾರಣ, ಕ್ಷಮೆ ಕೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ: ನನ್ನ ಮಾತಿನಿಂದ ಅವರ ಮನಸ್ಸಿಗೆ ಬೇಜಾರಾಗಿದ್ದರೆ ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ರೈಟ್.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಹೇಳಿದ್ದೀರಿ. 25ನೇ ತಾರೀಖಿನ ಒಳಗಡೆ ಚುನಾವಣಾ ಆಯೋಗದವರು ಹೇಳಿರುವ ಪ್ರಕಾರ ವರ್ಗಾವಣೆ ಮಾಡುವ ಹಾಗಿದ್ದರೆ ಮಾಡಿ ಎಂದು ಒಂದು ರೀತಿಯ ಪರೋಕ್ಷವಾದ ಸೂಚನೆಯನ್ನು ಅವರು ಕೊಟ್ಟಿದ್ದಾರೆ ಎಂದು. ಅವರೂ 25ನೇ ತಾರೀಖು ಒಂದು ಅಖೈರು ತಾರೀಖನ್ನು ನಿಗದಿಪಡಿಸಿದ್ದಾರೆ. ಆದರೆ ಈಗಾಗಲೇ ಬೇರೆ ರಾಜ್ಯಗಳಲ್ಲಿ ಒರಿಸ್ಸಾ, ಬಿಹಾರದಲ್ಲಿ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಇದು ವರದಿಯಾಗಿದೆ ಮತ್ತು ರೇಡಿಯೋ ಮತ್ತು ಟಿ.ವಿ.ಯಲ್ಲಿ ಕೂಡ ಬಂದಿದೆ. 25ನೇ ತಾರೀಖಿಗಿಂತ ಹಿಂದೆ ಮಾಡಿರತಕ್ಕಂಥ ವರ್ಗಾವಣೆ ಬಗ್ಗೆ ಚುನಾವಣಾ ಆಯೋಗ ಆಕ್ಷೇಪ ತೆಗೆದಿದೆ, ಇದನ್ನು ಮಾಡಕೂಡದು ಎನ್ನತಕ್ಕಂಥ ಅಭಿಪ್ರಾಯ ಈಗಾಗಲೇ ಅದರ ಪರಿಶೀಲನೆಯಲ್ಲಿದೆ ಎನ್ನತಕ್ಕಂಥ ಮಾತನ್ನು ತಾವು ಕೂಡ ತಿಳಿದುಕೊಂಡಿರಬಹುದು. ಪತ್ರಿಕೆಗಳು ಮತ್ತು ರೇಡಿಯೋ ಮೂಲಕ ನಾವು ಕೇಳಿದ್ದೇವೆ. ಇಂತಹ ಪರಿಸ್ಥಿತಿ ಇರುವಾಗ.....

ಅಧ್ಯಕ್ಷರು: ನಾನು ಎಲ್ಲಿಯೂ ಕೇಳಿಲ್ಲ.

ಶ್ರೀ ಸಿ. ಭೈರೇಗೌಡ: ನಾವು ಕೇಳಿದ್ದೇವೆ. ನಿನ್ನೆ ರಾತ್ರಿಯಂತೂ ನಾವು ಕೇಳಿದ್ದೇವೆ.

ಅಧ್ಯಕ್ಷರು: ಏನಂತ ರೇಡಿಯೋದಲ್ಲಿ ಹೇಳಿದ್ದಾರೆ?

ಶ್ರೀ ಸಿ. ಭೈರೇಗೌಡ: ಬಿಹಾರ ಮತ್ತು ಒರಿಸ್ಸಾ ರಾಜ್ಯದಲ್ಲಿ ಆಗಿರತಕ್ಕಂಥ ವರ್ಗಾವಣೆ ಬಗ್ಗೆ ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಚುನಾವಣಾ ಆಯೋಗದ ವರದಿಯನ್ನು ಟಿ.ವಿ. ಮತ್ತು ರೇಡಿಯೋಗಳಲ್ಲಿ ನಾನಂತೂ ಕೇಳಿದ್ದೇನೆ. ಪರಿಸ್ಥಿತಿ ಹೀಗೆ ಇರುವಾಗ ಈ ಸರ್ಕಾರ ಎರಡು-ಮೂರು ದಿವಸಗಳ ಹಿಂದೆ ಮಾಡಿರತಕ್ಕಂಥಾದ್ದು ಈ ವರ್ಗಾವಣೆ 25ನೇ ತಾರೀಖು ಮಾಡಿದ್ದಲ್ಲ. ಹಿಂದೆ 21-22,

ಬಹುಶಃ ತಾರೀಖು ನನಗೆ ಸರಿಯಾಗಿ ಗೊತ್ತಿಲ್ಲ. ಇದರ ಬಗ್ಗೆ ಚುನಾವಣಾ ಆಯೋಗ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಇದು ಸರಿಯೋ ತಪ್ಪೋ ಎನ್ನತಕ್ಕಂಥ ತೀರ್ಮಾನಕ್ಕೆ ಬರತಕ್ಕದ್ದು ಮತ್ತು ಅದನ್ನು ರಾಜ್ಯಸರ್ಕಾರ ಗಮನಕ್ಕೆ ತರಬೇಕು ಎನ್ನತಕ್ಕಂಥ ಒಂದು ಅಭಿಪ್ರಾಯ ಚುನಾವಣಾ ಆಯೋಗದ್ದು ಇದೆ. ಹೀಗೆ ಇರತಕ್ಕಂಥ ಸಂದರ್ಭದಲ್ಲಿ ಈ ಸರ್ಕಾರ ದಿಢೀರನೆ ನಿನ್ನೆ ಒಂದು ಪಟ್ಟಿಯನ್ನು ಬಿಡುಗಡೆ ಮಾಡಿದೆ. ತಾರೀಖು 23 ಅಥವಾ 24 ಎಂದು ಇದಕ್ಕೆ ಹಾಕಿಕೊಂಡಿರುತ್ತಾರೆ. ಅದು ಪೈಲ್ ಮೇಲೆ ಯಾವುದೋ ತಾರೀಖು ಇರುತ್ತದೆ. ಆದರೆ ಇವತ್ತು ರುಜುನಾಡಿ ನಿನ್ನೆ ಮೊನ್ನೆಯದೋ ತಾರೀಖು ಆಗಿರಬಹುದು. ಈ ಒಂದು ಪ್ರಬಲವಾದ ಅನುಮಾನ ನಮಗೆ ಇದೆ. ಏಕೆಂದರೆ ಈ ಸರ್ಕಾರ ಅದೆಲ್ಲ ಹಿಂದೆ ಮಾಡಿದೆ. ಆಜ್ಞೆಯನ್ನು ಯಾವತ್ತೂ ಮಾಡಿದ್ದು, ಅದಕ್ಕಿಂತ ಹಿಂದಿನ ತಾರೀಖನ್ನು ಹಾಕಿ ಆಜ್ಞೆ ಮಾಡಿರತಕ್ಕದ್ದು ನಿದರ್ಶನಗಳು ಇವೆ. ಅದು ನಮ್ಮ ಕರ್ನಾಟಕ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯುನಲ್ ಅಲ್ಲಿ ಕೂಡ ಇದರ ಬಗ್ಗೆ ಅಸಮಾಧಾನವನ್ನೂ ಸೂಚಿಸಿರತಕ್ಕ ನಿದರ್ಶನ ಕೂಡ ಇದೆ. ಯಾವುದನ್ನೂ ಕೂಡ ಮಾಡುವುದಕ್ಕೆ ಹೇಸತಕ್ಕಂಥ ಸರ್ಕಾರ ಹಿಂದೆ ಇದು ಮಾಡಿದೆ ಎಂಬುದಕ್ಕೆ ನಿದರ್ಶನ ಇದೆ. ಇವತ್ತು ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ಕೋಲಾರ ಜಿಲ್ಲಾಧಿಕಾರಿಗಳು, ಐ.ಎ.ಎಸ್. ಅಧಿಕಾರಿಯಾಗಿದ್ದು ಅವರು ಅಲ್ಲಿಗೆ ಬಂದು ಎಂಟು, ಒಂಭತ್ತು ತಿಂಗಳು ಆಗಿರಬಹುದು. ಈ ಸದನದ ಕಡತ ತೆಗೆಸಬೇಕು ತಾವು. ಏನು ರೆಕಾರ್ಡ್ ಆಗಿದೆ ಎಂದು ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಕೋಲಾರ ಜಿಲ್ಲಾಧಿಕಾರಿಗಳ ವಿಚಾರದಲ್ಲಿ ಬಹಳ ಓಪನ್ ಆಗಿ ಮಾತನಾಡಿದ್ದಾರೆ. ಬಹಳ ಚೆನ್ನಾಗಿ ಕೆಲಸ ನಿರ್ವಹಿಸಿದ್ದಾರೆ, ಅವರಿಗೆ ನಾವು ವಿಶೇಷವಾದಂಥ ಪ್ರಶಸ್ತಿ, ಬಹುಮಾನ ಕೋಡಬೇಕು ಎನ್ನುತಕ್ಕಂಥ ಅಲೋಚನೆ ಕೂಡ ಇದೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಅವರು ಹೇಳಿದ್ದಾರೆ. ಇವತ್ತು ಅಂತಹವರನ್ನು ಕೂಡವರ್ಗ ಮಾಡಿದ್ದಾರೆ. ಇದಕ್ಕೆ ಏನು ಕಾರಣ? ನನಗೆ ಗೊತ್ತಿದೆ. ಏಕೆ ಅವರನ್ನು ವರ್ಗಮಾಡಿದ್ದಾರೆ ಎಂದರೆ ನಮ್ಮ ಜಿಲ್ಲೆಯ ಗೌರಿಬಿದನೂರಿನಲ್ಲಿ, ಸುಮಾರು 4 ಕೋಟಿ, 5 ಕೋಟಿ ರೂಪಾಯಿಗಳು ಬೆಲೆ ಬಾಳುವಂಥ ಆಸ್ತಿ ವಿಚಾರ, ಅದು ಸರ್ಕಾರದ ಕೆರೆ, ಸಾರ್ವಜನಿಕ ಕೆರೆ. ಇದನ್ನು ಯಾರೋ ಒಬ್ಬರು ಹೊಡೆತಕೊಳ್ಳಬೇಕೆಂದು ಹುನ್ನಾರ ಹೂಡಿದರು. ಅದಕ್ಕೆ ತಡೆಹಾಕಿ,. ಇದು ಸರ್ಕಾರದ ಆಸ್ತಿ ಎಂದು ಇವರು ಘೋಷಣೆ ಮಾಡಿದರು. ಅದಕ್ಕೆ ಕೆರಳಿ, ಅವರನ್ನು ಅಲ್ಲಿಂದ ಇಲ್ಲಿಗೆ ಒಂದೇ ಘಳಿಗೆಯಲ್ಲಿ ವರ್ಗಾವಣೆ ಮಾಡಿದ್ದಾರೆ. ಬೆಳಿಗ್ಗೆ ವರ್ಗದ ಆಜ್ಞೆ ಹೋಗುವುದರಲ್ಲಿ ಜೊತೆಗೆ, ಅಲ್ಲಿಗೆ ಯಾರನ್ನು ಹಾಕಿದ್ದಾರೆ, ಅವರು ಹೋಗಿ ಇವರನ್ನು ರಿಲೀವ್ ಮಾಡಿ, ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳತಕ್ಕಂಥ ವ್ಯವಸ್ಥೆಯಾಗಿದೆ. ತುರ್ತು ಪರಿಸ್ಥಿತಿಯಲ್ಲಿಯೂ ಕೂಡ ಈ ರೀತಿಯಾದ ಆಜ್ಞೆಗಳನ್ನು ಮಾಡಿ, ದಿಢೀರ್ ಪರಿಸ್ಥಿತಿಗೆ ತೆಗೆದುಕೊಂಡುಹೋಗಿರಲಿಲ್ಲ. ಅಂಥದ್ದನ್ನು ಇವತ್ತಿನ ದಿವಸ ಮಾಡಿದ್ದಾರೆ.

(ಮುಂದಲ)

MR. SPEAKER : I will not allow to make such blanket sweeping charges against the Government. That will not form part of the record. Such a sweeping statement without a substantive motion cannot be made. If you ant to make a sweeping statement put a substantive motion against the Government on the table of the House and then make all these charges. You cannot make such charges.

ಶ್ರೀ ಸಿ. ಬೈರೇಗೌಡ: ತಾವು ಹೇಳುವುದನ್ನು ಒಪ್ಪುತ್ತೇನೆ. ನಾಳೆ ದಿವಸ ಸದನ ಮುಗಿಯುತ್ತದೆ, ಮತ್ತೆ ನಮಗೆ ಅವಕಾಶ ಇಲ್ಲ.

ಅಧ್ಯಕ್ಷರು : 200 ಜನ ಅಧಿಕಾರಿಗಳನ್ನು ವರ್ಗ ಮಾಡಿದರು ಎಂಬ ಆಧಾರದಮೇಲೆ ಅವಿಶ್ವಾಸ ನಿರ್ಣಯ ಮಂಡಿಸುತ್ತೇವೆಂದು ಹೇಳಿದರೆ, ಅದು ನಿಮಗೆ ಸೇರಿದವಿಚಾರ.

ಶ್ರೀ ಸಿ. ಬೈರೇಗೌಡ: ಇವತ್ತಿನದಿವಸ ಇದನ್ನು ಚಟಕ್ಕೆ ಮಾಡಬೇಕೆಂಬ ಉದ್ದೇಶ ಖಂಡಿತ ಇಲ್ಲ. ಇದರ ಬಗ್ಗೆ ವಿಚಾರಣೆ ನಡೆಯಲಿ, ಏನು ಆಜ್ಞೆ ಮಾಡಿದ್ದಾರೆ, ಇದು ಆಸ್ತಿಗೆ ಸಂಬಂಧಪಟ್ಟಿದ್ದು ಇವರನ್ನು ವರ್ಗ ಮಾಡಬೇಕಾಗಿದ್ದರೆ ಕಾರಣ ಏನು?

ಅಧ್ಯಕ್ಷರು : ಸ್ಥಳೀಯ ವಿಚಾರಗಳನ್ನು ಇಟ್ಟುಕೊಂಡು, ಅದರ ಮೇಲೆ ವಿಚಾರಣೆ ಮಾಡಿ ಎಂದ ಹೇಳಿದರೆ,, ಅದು ಸರಿಯಾಗುತ್ತದೆಯೇ? ನೀವು ಲೇಕಾಯುಕ್ತಕ್ಕೆ ಬರೆಯಿರಿ.

(ಗೊಂದಲ)

ಅಧ್ಯಕ್ಷರು : ಹಾಗಾದರೆ ಏನು ಮಾಡಬೇಕು. Shall I put to the vote of the House?

ಶ್ರೀ ಸಿ. ಬೈರೇಗೌಡ : ಸರ್ಕಾರವನ್ನು ಖಂಡಿಸಬೇಕು. ತಾವು ವಾಗ್ದಾಂಡನೆ ವಿಧಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕೋಲಾರ ಡಿ.ಸಿ. ಬಂದು 8 ತಿಂಗಳಾಗಿದೆ. ಮೈಸೂರು ಡಿ.ಸಿ. ಬಂದು 10 ತಿಂಗಳಾಗಿದೆ. ಹೀಗೆ 8-10 ತಿಂಗಳಲ್ಲಿಯೇ ವರ್ಗಾವಣೆಗಳಾಗುತ್ತಿದೆ. ಕೋಲಾರ ಜಿಲ್ಲಾಧಿಕಾರಿಗಳ ಬಗ್ಗೆ ತಾವೇ ಹೇಳಿದ್ದೀರಿ. ರೆಕಾರ್ಡ್‌ನಲ್ಲಿದೆ, ತಾವೇ ಒಳ್ಳೆಯ ಅಧಿಕಾರ ಎಂದು ಹೇಳಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ಸರ್ಕಾರದವರು ಅಧಿಕಾರಿಗಳ ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದಾರೆ. ಸರ್ಕಾರದವರ ಹೇಳಿಕೆ ಪ್ರಕಾರ, ಚುನಾವಣಾ ಆಯೋಗದವರು 25ನೇ ತಾರೀಖಿನೊಳಗಾಗಿ ವರ್ಗ ಮಾಡಬೇಕೆಂಬ ಸೂಚನೆ ಇತ್ತು. ಆದ್ದರಿಂದ 25ನೇ ತಾರೀಖಿನೊಳಗೆ ವರ್ಗಾವಣೆ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅದು ನಮಗೆ ಸಂಬಂಧಪಟ್ಟಿದ್ದಲ್ಲ. 25ನೇ ತಾರೀಖಿನೊಳಗೆ ವರ್ಗ ಮಾಡುವಂಥ ಅಧಿಕಾರ ಇದೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ನಾನು ಏನು ಪ್ರಸ್ತಾಪ ಮಾಡುವುದಕ್ಕೆ ಇಚ್ಚಿಪಡುತ್ತೇನೆಂದರೆ, ಯಾವ ಉದ್ದೇಶದಿಂದ ಕೆಲವು ಹಿರಿಯ ಅಧಿಕಾರಿಗಳನ್ನು ವರ್ಗ ಮಾಡಿದ್ದಾರೆ ಎನ್ನುವುದು ಬಹಳ ಮುಖ್ಯ. ಇದಕ್ಕೆ ಉತ್ತರ ಅವರಿಂದ ರೆಡಿಯಾಗಿದೆ. ಅದೂ ನನಗೆ ಗೊತ್ತಿದೆ. ಸಾರ್ವಜನಿಕ ಹಿತದೃಷ್ಟಿಯಿಂದ, ಆಡಳಿತದ ಅನುಕೂಲತೆ ದೃಷ್ಟಿಯಿಂದ ಎಂದು ಹೇಳುತ್ತಾರೆ. ಹಿಂದೆ ಯಾವುದೇ ಸರ್ಕಾರ ಇದ್ದಾಗಲೂ ಈ ರೀತಿ ಮಾಡಿದ್ದಾರೆ, ನಾವೂ ಮಾಡಿದ್ದೇವೆ ಎನ್ನುವ ಮಾತನ್ನೂ ಹೇಳುತ್ತಾರೆ.

ಅಧ್ಯಕ್ಷರು : ತಾಳಿ ಕಟ್ಟುವಾಗ ಮಂತ್ರ ಎಲ್ಲಾ ಒಂದೇ.

ಶ್ರೀ ವಾಟಾಳ್ ನಾಗರಾಜ್ : ಪುರೋಹಿತರು ಯಾವ ಟೈಮಿಗೆ ಹೇಳುತ್ತಾರೆ ಆ ಟೈಮ್‌ನಲ್ಲೇ ಕಟ್ಟಬೇಕು. ಬೇರೆ ಟೈಮ್‌ನಲ್ಲಿ ಕಟ್ಟಿದರೆ ಗಂಡ ಹೆಂಡತಿ ಇಬ್ಬರೂ ಉಳಿಯುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಕೆಟ್ಟ ಮಹೂರ್ತ ನೋಡಿ ತಾಳಿ ಕಟ್ಟಿರುತ್ತಾರೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮುಖ್ಯವಾದ ಪ್ರಶ್ನೆ ಏನೆಂದರೆ, ಚುನಾವಣೆ ಕಾಲ ಹತ್ತಿರ ಬಂದಿದೆ. ಚುನಾವಣೆ ಕಾಲದಲ್ಲಿ ಯಾವರೀತಿ ನಮಗೆ ಸಹಾಯಮಾಡುವಂತಹ ಅಧಿಕಾರಿಗಳು ಬೇಕು ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವರ್ಗಾವಣೆ ಮಾಡಿದ್ದರೆ ಅದು ಖಂಡನೀಯವಾದುದು ಎಂಬುದನ್ನು ತಾವೂ ಕೂಡ ಒಪ್ಪುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ಆಡಳಿತದ ದೃಷ್ಟಿಯಿಂದ, ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಈ ಕೆಲಸವನ್ನು ಮಾಡಿದ್ದರೆ ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಮೇಲುನೋಟಕ್ಕೆ ಏನು ಕಾಣುತ್ತಿದೆ, ಅನೇಕ ಜನ ಜಿಲ್ಲಾಧಿಕಾರಿಗಳನ್ನು, ಮತ್ತು ಜಿಲ್ಲಾ ಪೋಲೀಸ್ ರಕ್ಷಣಾಧಿಕಾರಿಗಳನ್ನು ವರ್ಗ ಮಾಡಿರುತ್ತಾರೆ. ಯಾವ ಕಾರಣದಿಂದ ಮಾಡಿರುತ್ತಾರೆ ಎಂದರೆ.

ಅಧ್ಯಕ್ಷರು : ಯಾವ ಸರಕಾರ ತಾನು ಮಾಡತಕ್ಕಂಥ ವರ್ಗಾವಣೆಗಳಿಗೆ ಶಾಸನಸಭೆಯಲ್ಲಿ ಎಕ್ಸ್‌ಪ್ಲನೇಷನ್, ವಿವರಣೆ ಕೊಡುವುದಕ್ಕೆ ಎಲ್ಲಿ ಅವಕಾಶ ಇದೆ ನೀವೆ ಹೇಳಿರಿ?

ಶ್ರೀ ಹೆಚ್. ಏಕಾಂತಯ್ಯ : ಇದು ವಿಶೇಷ ಸಂದರ್ಭ ಇದೆ. ಜೂನ್‌ನಲ್ಲಿ ಮಾಡಿದ್ದರೆ ನಾವು ಇದನ್ನು ಕೇಳುತ್ತಿರಲಿಲ್ಲ.

ಅಧ್ಯಕ್ಷರು : ಇದು ಒಂದು ಆಚಾರ ಸಂಹಿತೆ ಅಷ್ಟೆ. ರಾಮಪ್ಪನವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಎಂ. ರಾಮಪ್ಪ : ನಾನು ಒಂದು ವಿಚಾರ ಅವರಿಗೆ ಕೇಳಬೇಕಾಗುತ್ತದೆ. ಅಧಿಕಾರಿಗಳು ಪ್ರಮಾಣಿಕರೋ ಅಪ್ರಾಮಾಣಿಕರೋ ಎಂಬುದನ್ನು ನೋಡಿ ಮಾತನಾಡಬೇಕು.

ಅಪ್ರಮಾಣಿಕರನ್ನು ಹಾಕಿದ್ದಾರೆ ಎಂದು ಪುರಾವೆಗಳನ್ನು ತೋರಿಸಿಬಿಟ್ಟರೆ, ಸರಕಾರದವರು ಮಾಡಿರುವುದು ತಪ್ಪು ಎಂದು ಹೇಳಬಹುದು. ಸರ್ಕಾರದ ಆಡಳಿತದಲ್ಲಿ ಕೈಹಾಕಿ ಈ ರೀತಿ ಹೇಳುವ ಅಧಿಕಾರ ಅವರಿಗೆ ಎಲ್ಲಿಂದ ಬಂತು, ನಮಗೇನೂ ಒಂದೂ ಅರ್ಥವಾಗುತ್ತಿಲ್ಲ. ಎಲ್ಲಾ ವಿಚಾರದಲ್ಲೂ ಸರಕಾರಕ್ಕೆ ಇರತಕ್ಕ ಅಧಿಕಾರವನ್ನು ಅವರಿಗೇ ಕೊಟ್ಟುಬಿಡುವುದು ಇದ್ದರೆ ಕೊಟ್ಟು ಬಿಡಿರಿ. ನಾವು ಮಾತನಾಡುವ ಕೆಲಸ ಏನೂ ಇರುವುದಿಲ್ಲ. ಯಾರೂ ಪ್ರಮಾಣಿಕರು, ಯಾರು ಅಪ್ರಾಮಾಣಿಕರು ಎಂದು ಇವರು ಹೇಗೆ ಹೇಳುತ್ತಾರೆ. ಎಲ್ಲಾ ಕಡೆ ಪ್ರಮಾಣಿಕರನ್ನೇ ಸರಕಾರದವರು ಹಾಕಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ರಾಮಪ್ಪನವರು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಕೋಲಾರ ಜಿಲ್ಲಾಧಿಕಾರಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಇಲ್ಲಿ ಹೇಳಿದ್ದಾರೆ. ಏನು ಹೇಳಿದ್ದಾರೆ ಅದನ್ನು ತೆಗೆದುನೋಡಿರಿ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ನಾನು ಸಹ ಒಪ್ಪುತ್ತೇನೆ. ಪ್ರಮಾಣಿಕರಾದ ದಕ್ಷರಾದ ಅಧಿಕಾರಿಗಳನ್ನು ಇಂತಹ ಸೂಕ್ಷ್ಮವಾದ ಸ್ಥಾನಗಳಲ್ಲಿ ನೇಮಿಸಬೇಕೆಂಬುದು ಸರಕಾರದ ಆಸೆ ಆಗಿದ್ದರೆ ಖಂಡಿತಾ ಅದಕ್ಕೆ ನನ್ನ ಬೆಂಬಲ ಇದೆ. ಕೆಲವು ವ್ಯಕ್ತಿಗಳನ್ನೇ ನೋಡಿ ಈ ರೀತಿ ಮಾಡಿರುತ್ತಾರೆ.

ಅಧ್ಯಕ್ಷರು : ಏಕಾಂತಯ್ಯನವರೇ ಒಂದು ತಿದ್ದುಪಡಿ. ಸಹಕಾರಿ ಕೆಲಸದಲ್ಲಿ ಎಲ್ಲಿಯವರೆಗೆ ಅಧಿಕಾರಿಗಳು ಇರುತ್ತಾರೋ ಡಿ ಪ್ರಿಸಂಪ್‌ಷನ್ ಈಸ್ ಅವರು ಪ್ರಾಮಾಣಿಕರು ಎಂದು ಮುಂದುವರಿಯಿರಿ..

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಅಲ್ಲೇ ಮುಂದುವರೆಯಲಿ. ಪ್ರಾಮಾಣಿಕರಿದ್ದರೆ ಏತಕ್ಕೆ ಅವರನ್ನು ವರ್ಗ ಮಾಡುತ್ತೀರಿ. ನಮ್ಮದೇನೂ ಬೇರೆ ಇಲ್ಲ.

Sri. H. Ekanthaiah : Everybody is a gentleman unless he is proved otherwise. ಅದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು : ನೀವೇ ಮಾಡಿದ್ದೀರಲ್ಲ, ಲೋಕಾಯುಕ್ತ, ಉಪಲೋಕಾಯುಕ್ತ ವಿಜಿಲೆನ್ಸ್ and they have to pass through all those tests.

ಶ್ರೀ ಹೆಚ್. ಏಕಾಂತಯ್ಯ : ಎಲ್ಲಾ ಅಲ್ಲೇ ಇದೆ. ಇವತ್ತಿನದಿವಸ ಏನು ಈ ರೀತಿ ಸಮೂಹಿಕ ವರ್ಗಾವಣೆ ಮಾಡಿರುತ್ತಾರೆ. ಅದು ಆಡಳಿತದ ಅನುಕೂಲದ ದೃಷ್ಟಿಯಿಂದ ಮಾಡಿರತಕ್ಕ ವರ್ಗಾವಣೆ ಅಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿರತಕ್ಕಂದ್ದಲ್ಲ. ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಾಡಿರುವ ವರ್ಗಾವಣೆಯಾಗಿದೆ. ಇದರ ಬಗ್ಗೆ ವಿವರಣೆಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಖಮರುಲ್ ಇಸ್ಲಾಂ....

ಶ್ರೀ ಕೆ.ಎಸ್. ಈಶ್ವರಪ್ಪ : ಚುನಾವಣೆ ರದ್ದು ಮಾಡಬೇಕು ಸರಕಾರ

(ಗೊಂದಲ)

ಅಧ್ಯಕ್ಷರು : ಆಯಿತು ಚುನಾವಣೆ ರದ್ದು ಮಾಡೋಣ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಚುನಾವಣಾ ಆಯೋಗದ ಏನು ನೀತಿ ನಿಯಮಗಳು ಇವೆ, ಆ ನೀತಿ ನಿಯಮಗಳನ್ನು ಸರಕಾರ ಗಾಳಿಗೆ ತೂರಿದೆ..

ಅಧ್ಯಕ್ಷರು : ವಿರೋಧಪಕ್ಷದ ನಾಯಕರು, ತಾವು ಒಪ್ಪುತ್ತೀರಿ ಎಂದು ಕಾಣುತ್ತದೆ, ವರ್ಗಾವಣೆ ವಿಚಾರ ಸಾಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಈ ಮಾಸ್ ಟ್ರಾನ್ಸ್‌ಫರ್ಸ್ ಬಗ್ಗೆ ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಗೃಹಸಚಿವರು ಈಗಾಗಲೇ ಸಾಕಾದಷ್ಟು ವಿವರಣೆ ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೂರಾರು ಜನ ಹಿರಿಯ ಅಧಿಕಾರಿಗಳನ್ನು ವಿಕಾವಿಕಿ ವರ್ಗಾವಣೆ ಮಾಡಿರುತ್ತಾರೆ. ಇದು ಸರಿಯಾದ ಕ್ರಮ ಅಲ್ಲ ಎಂದು ಇಷ್ಟುಹೊತ್ತು ಸುಮಾರು ಮುಕ್ಕಾಲು ಘಂಟೆ ವಾದ ಮಾಡಿರುತ್ತೇವೆ. ತಾವೇನಾದರೂ ಹೇಳುತ್ತೀರಾ ಎಂದು ಕೇಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಬಂದಮೇಲೆ ವರ್ಗಾವಣೆ ಕ್ಯಾನ್ಸಲ್ ಮಾಡಿಸುತ್ತೇವೆಂದು ಶಿವಣ್ಣನವರು ಹೇಳಿದರು..

(ಗೊಂದಲ)

11.50 ಎ.ಎಂ.

ಶ್ರೀ ಎ.ಬಿ. ಜಕನೂರು : ಮಾನ್ಯ ಅಧ್ಯಕ್ಷರೇ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಬಗ್ಗೆ ಸ್ವತಃ ಚುನಾವಣೆ ಕಮಾಷನ್‌ರವರು ಹೇಳಿದ್ದಾರೆ. There is no legal bar to transfer officers and officials. However, it has advised the Central Government and State Governments not to make transfers. There is no legal

bar ಇದನ್ನು ವಿಚಾರ ಮಾಡಿದೆ ಈಗ ಬಂದು ಇಲ್ಲಿ ಯಾವುದೇ ರೂಲ್ಸ್ ಇಲ್ಲ ಏನೂ ಇಲ್ಲ ಸಿಕ್ಕಾಪಟ್ಟೆ ವರ್ಗಾವಣೆ ಬಗ್ಗೆ ಮಾತನಾಡುವುದು ಸರಿಯಲ್ಲ.

Mr. SPEAKER : I uphold your contention.

ಶ್ರಿ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ ಅವರಿಂದ ನಮಗೆ ಉತ್ತರ ಬೇಕು.

ಅಧ್ಯಕ್ಷರು : ನಾನು ಮಾನ್ಯ ಜಕನೂರ್‌ರವರ ಕಂಟಿನ್‌ಷನ್ ಅನ್ನು ಅಪ್‌ಹೆಲ್ಡ್ ಮಾಡಿದ್ದೇನೆ. ಅದೇ ನಿಮಗೆ ಉತ್ತರ. ವರ್ಗಾವಣೆಗೂ ಈ ಸಭೆಗೂ ಅರ್ಥಾತ್ ಸಂಬಂಧ ಇಲ್ಲ. ಮಾನ್ಯ ಸಿಂಧ್ಯಾ ಅವರು ತಾವು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಇದನ್ನು ಪ್ರತಿಭಟನೆ ಮಾಡುತ್ತೇನೆ. ಇದು ಪ್ರಜಾಪ್ರಭುತ್ವಕ್ಕೆ ವಿರೋಧ ಎಂಬುದು ಸ್ಪಷ್ಟವಾಗಿದೆ. ಇದು ಪ್ರಜಾಪ್ರಭುತ್ವಕ್ಕೆ ಈ ಸರ್ಕಾರ ಮಾಡುತ್ತಿರುವ ಅನ್ಯಾಯ.

(ಕೆ.ಎಸ್. ಈಶ್ವರಪ್ಪನವರು ವೆಲ್‌ನಲ್ಲಿ ಬಂದು ಕುಳಿತುಕೊಂಡರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾವು ಸಾರಿ ಸಾರಿ ಮನವಿ ಮಾಡಿದ್ದೇವೆ. ಈ ಸಂದರ್ಭದಲ್ಲಿ ಅವರು ಅಧಿಕಾರಿಗಳನ್ನು ಬದಲಾವಣೆ ಮಾಡಿದ್ದುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಮತ್ತೊಮ್ಮೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಸಲ್ಲಿಸುತ್ತೇನೆ ತಮ್ಮ ಮೂಲಕ ಈಗ ಆಗಿರತಕ್ಕಂಥ ಆಜ್ಞೆಯನ್ನು ತಡೆಹಿಡಿಯುತ್ತೀರಾ? ತಾವು ಬೇಕಾದರೆ ಜೂನ್ ತಿಂಗಳಲ್ಲಿ ಮಾಡಿಕೊಳ್ಳಿ. ಇತ್ತೀಚೆಗೆ ಅನೇಕ ಅಧಿಕಾರಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೊಗಳಿದ್ದಾರೆ. ಕೋಲಾರದ ಜಿಲ್ಲಾಧಿಕಾರಿಗಳು ತುಂಬಾ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರು ಅಲ್ಲಿಗೆ ಹೋಗಿ 8 ತಿಂಗಳಾಯಿತು. ಮೈಸೂರು ಜಿಲ್ಲಾಧಿಕಾರಿ ಹೋಗಿ 10 ತಿಂಗಳಾಯಿತು. ಅವರನ್ನು ಬದಲಾವಣೆ ಮಾಡಿದ್ದಾರೆ. ಅನೇಕ ಕಡೆ ಈ ರೀತಿ ಆಗಿದೆ. ಇದು ತಮ್ಮ ಗಮನಕ್ಕೆ ಬಾರದೆ ಏನಾದರೂ ಆಗಿ ಹೋಗಿದೆಯೋ ಹೇಗೆ? ದಯವಿಟ್ಟು ತಾವು ಹೇಳಬೇಕು ಇದು ಸರಿ ಅಲ್ಲ. ವಿಧಿ ಇಲ್ಲದೆ ನಿಮ್ಮ ನೀತಿಯನ್ನು ವಿರೋಧಿಸಿ ನಾನು ಧರಣಿ ಮಾಡಬೇಕಾಗುತ್ತದೆ. ದಯವಿಟ್ಟು ಈ ಆಜ್ಞೆಯನ್ನು ಹಿಂತೆಗೆದುಕೊಳ್ಳಿ. ಈ ಸಭೆಯಲ್ಲಿ ಆ ರೀತಿ ಹೇಳಿ. ಒಳ್ಳೆಯ ವಾತಾವರಣ ಸೃಷ್ಟಿ ಆಗಲಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

1) ಬೆಂಗಳೂರು ನಗರದ ಕೆಲವು ಭಾಗಗಳಲ್ಲಿ ಉದ್ಭವಿಸಿದ ಕೋಮು ಗಲಭೆಗಳಿಂದ ಕರ್ಫ್ಯೂ.

ಅಧ್ಯಕ್ಷರು : ಸಿಂಧ್ಯಾ ತಾವು ಮಾತನಾಡಿ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ನಾನು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಬಹಳ ಕಳಕಳಿಯಿಂದ ಈ ಸಂದರ್ಭದಲ್ಲಿ ತರಬಯಸುತ್ತೇನೆ. ಕೋಮು ಗಲಭೆಗಳಿಂದ ನಗರದ ಕೆಲವು ಭಾಗಗಳಲ್ಲಿ ಕರ್ಫ್ಯೂ ಹಾಕಿರತಕ್ಕಂಥಾದ್ದು ಬಹಳ ದುರ್ದೈವದ ಸಂಗತಿ. ಅಧಿಕೃತವಾಗಿ ಕರ್ಫ್ಯೂ ಜಾರಿ ಮಾಡಿದ್ದಾರೆ. ನಿನ್ನೆ ಅಧಿವೇಶನ ಮುಗಿದ ಮೇಲೆ ನಾನು ನನ್ನ ಕ್ಷೇತ್ರದಿಂದ ವಾಪಸ್ಸು ಬರುವಾಗ ನಗರದ ಅನೇಕ ಭಾಗಗಳಲ್ಲಿ ಈ ಕರ್ಫ್ಯೂ ಇತ್ತು. ನಾನು ಮನೆಗೆ ಸೇರುವುದಕ್ಕೆ ಕಷ್ಟ ಆಯಿತು. ಪೋಲೀಸರು ಎಲ್ಲಾ ಕಡೆಗಳಲ್ಲಿ ನಿಂತು ಟ್ರಾಫಿಕ್ ಕ್ಲೋಜ್ ಮಾಡುತ್ತಿದ್ದರು. ಗಲಾಟೆಯಾಗುವ ಸಂಭವ ಇತ್ತು. ಚುನಾವಣೆ ಬಂದಿರುವುದರಿಂದ ಕೆಲವು ರಾಜಕೀಯ ಪಕ್ಷಗಳು ಇದನ್ನು ಉಪಯೋಗಿಸಿಕೊಂಡು ಕೋಮು ಸೌಹಾರ್ದತೆಯನ್ನು ಹಾಳು